KAVN400012302016

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹಡಗಲಿ

ಉಪಸ್ಥಿತಿ

**ಶ್ರೀಮತಿ ಅಕ್ಷತಾ ಟಿ.**

ಬಿ.ಎ.ಎಲ್.ಎಲ್.ಬಿ., ಎಲ್.ಎಲ್.ಎಮ್, .

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**

**ಹಡಗಲಿ**

**ತೀರ್ಪಿನ ದಿನಾಂಕಃ 09 ನೇ ಜೂನ್ 2026**

## ಸಿ.ಸಿ. ನಂ.656/2016

ಕರ್ನಾಟಕ ಸರ್ಕಾರ.
ಹಡಗಲಿ ಪೋಲಿಸ್ ಠಾಣೆ ...ಪಿರ್ಯಾದುದಾರರು
(ಸ ಸ ಅ ರವರು).

-ವಿರುದ್ಧ-

ಬಾವಿಮನಿ ಶಿವಕುಮಾರ ಅಲಿಯಾಸ್
ಶಿವು ಅಲಿಯಾಸ್ ಗಿರೀಶ್
ವಾಸಃ ಮಾನ್ಯರಮಸಲವಾಡ ಗ್ರಾಮ,
ಹಡಗಲಿ ತಾಃ ವಿಜಯನಗರ ಜಿಃ ...ಅರೋಪಿತರು

(ಅರೋಪಿತರ ಪರ ಶ್ರೀ.ಎಸ್.ಜಿ.ಆರ್.ವಕೀಲರು)

| | | |
|---|---|---|
| 1. | ಅಪರಾಧ ನಡೆದ ದಿನಾಂಕ | **12.03.2016** |
| 2. | ಅಪರಾಧ ವರದಿಯ ದಿನಾಂಕ | **07.01.2016** |
| 3. | ಪ್ರಥಮ ಮಾಹಿತಿದಾರರ ಹೆಸರು | ಶ್ರೀ ಶಿವಕುಮಾರ ಎಂ.ಜಿ. |
| 4. | ಸಾಕ್ಷ್ಯವನ್ನು ಅಭಿಲೇಖಿಸುವ ಪ್ರಾರಂಭದ ದಿನಾಂಕ | **13.01.2025** |

| | | |
|---|---|---|
| 5. | ಸಾಕ್ಷ್ಯವನ್ನು ಅಭಿಲೇಖಿಸುವ ಕೊನೆಯ ದಿನಾಂಕ | **30.05.2026** |
| 6. | ಆರೋಪಿತರ ವಿರುದ್ಧ ಮಾಡಲಾದ ಅಪಾದನೆಗಳು | ಭಾ.ದಂ.ಸಂ.ಕಲಂ.**454** ಮತ್ತು **380** ರ ಅಡಿಯಲ್ಲಿ |
| 7. | ನ್ಯಾಯಾಧೀಶರ ಅಭಿಪ್ರಾಯ | ದೋಷಾರೋಪಣೆ ಸಾಭೀತಾಗಿರುವುದಿಲ್ಲ. |

# ತೀರ್ಪು

ಪಿ.ಎಸ್.ಐ ಹಡಗಲಿ ಪೊಲೀಸ್ ಠಾಣೆ, ಇವರು ಆರೋಪಿತರ ಮೇಲೆ ಭಾ.ದಂ.ಸಂ. ಕಲಂ.**454** ಮತ್ತು **380** ರ ಅಡಿಯಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

## 2) ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶಃ-

ದಿನಾಂಕ **07.01.2016** ರಂದು ಮಧ್ಯಾಹ್ನ **1.45** ಗಂಟೆಗೆ ಹೂವಿನಹಡಗಲಿ ಪೋಲಿಸ್ ಠಾಣಾ ವ್ಯಾಪ್ತಿಯ ಹೂವಿನಹಡಗಲಿ ಪಟ್ಟಣದ ಬಸವಪ್ರಭು ಬಡಾವಣೆಯಲ್ಲಿ ಚಾಸಾ 3 ರವರು ಕಟ್ಟಿಸಿದ ಮನೆ ನಂ.198-ಎ ನೇದ್ದರಲ್ಲಿ ಚಾಸಾ1 ಮತ್ತು 2 ರವರು ಬಾಡಿಗೆ ಇದ್ದು, ಚಾಸಾ 1 ರವರ ಮನೆಯ ಮುಂಬಾಗಿಲಿಗೆ ಹಾಕಿದ ಬೀಗ ಮುರಿದು ಮನೆಯಲ್ಲಿದ್ದ ಗಾಡ್ರೇಜಿನ ಇಂಟರ್ ಲಾಕರ್ ಮುರಿದು ಲಾಕರ್ನಲ್ಲಿದ್ದ ನಗದು ಹಣ 240-00 ರೂಪಾಯಿಗಳನ್ನು ಹಾಗೂ ರೋಲ್ಗೋಲ್ಡನ ಬಳೆಗಳನ್ನು ಕಳ್ಳತನ ಮಾಡಿ ಅಪರಾಧವಾಗಿರುತ್ತದೆ.

**3)** ಚಾಸಾ.**1**ರವರು ಸಲ್ಲಿಸಿದ ಪ್ರಥಮ ಮಾಹಿತಿಯ ಮೆರೆಗೆ ಹಡಗಲಿ ಪೊಲೀಸರು ಠಾಣೆ ಗುನ್ನೆ ನಂಬರ.**4/2016** ರಂತೆ ಪ್ರಕರಣರವನ್ನು ದಾಖಲಿಸಿಕೊಂಡು, ತನಿಖಾಧಿಕಾರಿ ಅವರು ತನಿಖೆಯನ್ನು ಪೂರೈಸಿ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4) ದೋಷಾರೋಪಣೆಯನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯದಿಂದ ಆರೋಪಿತನ ವಿರುದ್ದ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಆದೇಶ ಜಾರಿಯಾದ ಮೇಲೆ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿತನಿಗೆ ಕಲಂ.207 ಸಿ.ಆರ್.ಪಿ.ಸಿ. ಪ್ರಕಾರ ದೋಷಾರೋಪಣೆಯ ಪ್ರತಿಯನ್ನು ನೀಡಲಾಯಿತು.

5) ಆರೋಪಿತನ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದ್ದು, ಆರೋಪಿತನು ತಪ್ಪು ಒಪ್ಪಿಕೊಳ್ಳದೆ ವಿಚಾರಣೆ ಆಗಲು ಕೇಳಿಕೊಂಡಿರುತ್ತಾರೆ. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತು ಪಡಿಸಲು ಫ್ರಾಸಾ.1 ರಿಂದ 11 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ, ನಿಪಿ.01 ರಿಂದ 10 ನ್ನು ಮತ್ತು ಮು.ಮಾ.1 ರಿಂದ 4 ನ್ನು ಗುರುತಿಸಿಕೊಂಡಿರುತ್ತಾರೆ.

6) ಅಭಿಯೋಜನೆಯ ಮತ್ತು ಆರೋಪಿತರ ಪರ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು. ಕಡತದಲ್ಲಿ ಲಭ್ಯವಿರುವ ದಾಖಲಾತಿಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ತಿರ್ಮಾನಕ್ಕಾಗಿ ಬಂದಿರುತ್ತವೆ;

<u>ಅಂಶ 1:-</u> ದಿನಾಂಕ 07.01.2016 ರಂದು ಮಧ್ಯಾಹ್ಞ 1.45 ಗಂಟೆಗೆ ಹೂವಿನಹಡಗಲಿ ಪೋಲಿಸ್ ಠಾಣಾ ವ್ಯಾಪ್ತಿಯ ಹೂವಿನಹಡಗಲಿ ಪಟ್ಟಣದ ಬಸವಪ್ರಭು ಬಡಾವಣೆಯಲ್ಲಿ ಚಾಸಾ 3 ರವರು ಕಟ್ಟಿಸಿದ ಮನೆ ನಂ.198-ಎ ನೇದ್ದರಲ್ಲಿ ಚಾಸಾ1 ಮತ್ತು 2 ರವರು ಬಾಡಿಗೆ ಇದ್ದು, ಚಾಸಾ 1 ರವರ ಮನೆಯ ಮುಂಬಾಗಿಲಿಗೆ ಹಾಕಿದ ಬೀಗ ಮುರಿದು ಮನೆಯಲ್ಲಿದ್ದ ಗಾಡ್ರೇಜಿನ ಇಂಟರ್ ಲಾಕರ್ ಮುರಿದು ಲಾಕರ್ನಲ್ಲಿದ್ದ ನಗದು ಹಣ 240-00 ರೂಪಾಯಿಗಳನ್ನು ಹಾಗೂ ರೋಲ್ಡೋಲ್ಡ ಬಳೆಗಳನ್ನು ಕಳ್ಳತನ ಮಾಡಿ ಭಾ.ದಂ.ಸಂ.ಕಲಂ.380 ಅಧಿನಿಯಮದಡಿ ಅಪರಾಧ ಮಾಡಿರುವರೆಂದು

ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತಾರೆಯೆ?

<u>ಅಂಶ 2:-</u> ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ, ಅರೋಪಿ ಬೀಗ ಹಾಕಿದ್ದ ಮನೆಗೆ ಹೊಂಚು ಹಾಕಿ ಕಳ್ಳತನ ಮಾಡಿ, ಆ ಮೂಲಕ ಭಾ.ದಂ.ಸಂ.ಕಲಂ. 454 ಅರಡಿಯಲ್ಲಿ ಸಮಾನ ಉದ್ದೇಶದಿಂದ ಅಪರಾಧ ಮಾಡಿರುವರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತಾರೆಯೆ ?

<u>ಅಂಶ 03:-</u> ಏನು ಆದೇಶ ?

7) ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ *1:-* ನಕಾರಾತ್ಮಕ
ಅಂಶ *2:-* ನಕಾರಾತ್ಮಕ
ಅಂಶ *3:-* ಈ ಕೆಳಗಿನ ಕಾರಣಗಳಿಗಾಗಿ ಅಂತಿಮ ಆದೇಶದಂತೆ.

## <u>ಕಾರಣಗಳು</u>

8) <u>ಅಂಶ 1 ಮತ್ತು 2</u> :- ಅಂಶ 1 ಮತ್ತು 2 ಗಳು ಒಂದೇ ರೀತಿಯ ಚರ್ಚೆಯ ವಿಷಯಗಳನ್ನು ಹೊಂದಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗಾಗಿ ತೆಗೆದುಕೊಳ್ಳಲಾಯಿತು. ಅಭಿಯೋಜನೆಯ ಪ್ರಕಾರ,

ದಿನಾಂಕ **07.01.2016** ರಂದು ಮಧ್ಯಾಹ್ನ **1.45** ಗಂಟೆಗೆ ಹೂವಿನಹಡಗಲಿ ಪೋಲಿಸ್ ಠಾಣಾ ವ್ಯಾಪ್ತಿಯ ಹೂವಿನಹಡಗಲಿ ಪಟ್ಟಣದ ಬಸವಪ್ರಭು ಬಡಾವಣೆಯಲ್ಲಿ ಚಾಸಾ 3 ರವರು ಕಟ್ಟಿಸಿದ ಮನೆ ನಂ.198-ಎ ನೇದ್ದರಲ್ಲಿ ಚಾಸಾ1 ಮತ್ತು 2 ರವರು ಬಾಡಿಗೆ ಇದ್ದು, ಚಾಸಾ 1 ರವರ ಮನೆಯ ಮುಂಬಾಗಿಲಿಗೆ ಹಾಕಿದ ಬೀಗ ಮುರಿದು ಮನೆಯಲ್ಲಿದ್ದ ಗಾಡ್ರೇಜಿನ ಇಂಟರ್

ಲಾಕರ್ ಮುರಿದು ಲಾಕರ್ನಲ್ಲಿದ್ದ ನಗದು ಹಣ 240-00 ರೂಪಾಯಿಗಳನ್ನು ಹಾಗೂ ರೋಲ್ಗೋಲ್ಡ ಬಳೆಗಳನ್ನು ಕಳ್ಳತನ ಮಾಡಿ ಅಪರಾಧವಾಗಿರುತ್ತದೆ.

9) ತನ್ನ ಪ್ರಕರಣವನ್ನು ಸಾಭೀತುಪಡಿಸಲು ಅಭಿಯೋಜನೆಯು ತನ್ನ ಪರವಾಗಿ ಫ್ರಾಸಾ.1 ರಿಂದ 11 ಅಂತಾ ಸಾಕ್ಷಿ ವಿಚಾರಣೆ ಮಾಡಿ ಮತ್ತು ನಿಪಿ.1 ರಿಂದ 10 ನ್ನು ಮತ್ತು ಮು.ಮಾ.1 ರಿಂದ 4 ನ್ನು ಗುರುತಿಸಿಕೊಂಡಿರುತ್ತಾರೆ.

10) ಫ್ರಾಸಾ.1 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ಇರುವುದಿಲ್ಲ, ತಾನು ಮತ್ತು ತನ್ನ ಹೆಂಡತಿಯಾದ ಚಾ.ಸಾ.02 ರವರು ಶಿಕ್ಷಕರು ಆಗಿರುತ್ತೇವೆ, ದಿ.07-01-2016 ರಂದು ತಾವು ಎಂದಿನಂತೆ ಶಾಲೆಗೆ ಹೋಗಿರುತ್ತೇವೆ, ಆ ದಿನ ತನ್ನ ಹೆಂಡತಿಯಾದ ಚಾ.ಸಾ.02 ರವರು ಸಂಜೆ.05.20 ರ ಸುಮಾರಿಗೆ ಮೊದಲು ಮನೆಗೆ ಬಂದಿರುತ್ತಾರೆ, ಆಗ ಮನೆಯ ಬೀಗ ಮುರಿದಿರುವುದನ್ನು ಕಂಡು ಒಳಗೆ ಹೋಗಿ ನೋಡಿದಾಗ ತಮ್ಮ ಮನೆಯ ಟಿವಿ, ಲೈಟು, ಫ್ಯಾನು ಎಲ್ಲವೂ ಚಾಲನೆಯಲ್ಲಿತ್ತು ತಮ್ಮ ಎರಡು ಬೆಡರೂಂಮಿನ ನಡುವೆ ಇರುವಂತಹ ಜಾಗದಲ್ಲಿ ಬೀರುವನ್ನು ಇಟ್ಟಿರುತ್ತೇವೆ ಸದರಿ ಬೀರುವಿನ ಬೀಗ ಮುರಿದು ಅದರಲ್ಲಿದ್ದ 4 ರೋಡಗೋಲ್ಡ ಬಳೆಗಳು, 10/- ಮುಖಬೆಲೆಯ 24 ನೋಟುಗಳು ಒಟ್ಟು 240/- ರೂಪಾಯಿಗಳು, 500/- ರೂ ಮುಖಬೆಲೆಯ 20 ನೋಟುಗಳು ಒಟ್ಟು 10,000/- ನಗದು ಹಣ, ತನ್ನ ಮಗಳ ಒಂದು ತೊಲೆಯ ಕೊರಳಿನ ಬಂಗಾರದ ಚೈನ ಸರ್, ತನ್ನ ಹೆಂಡತಿಯಾದ ಚಾ.ಸಾ.02 ರವರ ಒಂದು ಬಂಗಾರದ ಸಾಧಾ ಉಂಗುರ ಅದರ ತೂಕ ಅರ್ಧ ತೊಲೆ, ಮತ್ತು ನನ್ನ ಎರಡು ಬಂಗಾರದ ಚೌಕಾಕಾರದ 2

ಉಂಗುರಗಳು ಅಂದಾಜು ತೂಕ 2 ಮುಕ್ಕಾಲು ತೊಲೆ ಆಗಿರುತ್ತದೆ. ಅದನ್ನು ಯಾರೋ ಕಳ್ಳರು ಬಂದು ನಾವು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಬಂದು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ನಂತರ ನಾನು ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ತಾನು ಠಾಣೆಯಲ್ಲಿದ್ದಾಗಲೇ ನನ್ನ ಹೆಂಡತಿಯಾದ ಚಾ,ಸಾ.02 ರವರು ತನಗೆ ದೂರವಾಣಿ ಮೂಲಕ ನಾನು 500/- ಮುಖಬೆಲೆಯ ಒಟ್ಟು 20 ನೋಟುಗಳನ್ನು ನಾನು ನನ್ನ ಪೋಸ್ಟ ಆಫೀಸಿನ RD ಬುಕ್ಕಿನಲ್ಲಿ ಇಟ್ಟಿರುವುದನ್ನು ಗಮನಿಸಿ ನನಗೆ ತಿಳಿಸಿರುತ್ತಾರೆ. ನಮ್ಮ ತಾಯಿಯವರು ನನ್ನ ಹೆಂಡತಿಯಾದ ಚಾ,ಸಾ.02 ರವರ ಮನೆಗೆ ಹೋಗಿರುತ್ತಾರೆ, ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಕಳ್ಳತನ ಆಗಿರುವ ಬಗ್ಗೆ ವಿಷಯ ತಿಳಿದು ಅವರು ನಮ್ಮ ಅತ್ತೇ ಯವರಿಗೆ ನನ್ನ ತಾಯಿಯವರು ನನ್ನ ಮಗಳ ಕೊರಳ ಚೈನ ಸರ ಮತ್ತು ನನ್ನ 02 ಉಂಗುರ ಮತ್ತು ನನ್ನ ಹೆಂಡತಿಯ 01 ಉಂಗುರ ತನ್ನ ಹತ್ತಿರವೇ ಇರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಕಳುವಾಗಿದೆ ಎಂದು ಭಾವಿಸಿದ ಬಂಗಾರದ ಒಡವೆಗಳು ನನ್ನ ತಾಯಿಯ ಬಳಿ ದೊರೆತಿರುತ್ತದೆ ಎಂದು ನಾನು ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ ನಮ್ಮ ಮನೆಯಲ್ಲಿ ಗಾಡ್ರೆಜಿನ ಲಾಕರನಲ್ಲಿ ಇಟ್ಟಿದ್ದ 10/- ಮುಖ ಬೆಲೆಯ 240/- ರೂಪಾಯಿ ಹಾಗೂ 4 ರೋಡಗೋಲ್ಡ ಬಳೆಗಳು ಮಾತ್ರ ಕಳ್ಳತನವಾಗಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ. ದಿ.08-01-2016 ರಂದು ನಮ್ಮ ಮನೆಗೆ ಪೊಲೀಸರು ಭೇಟಿ ನೀಡಿ ಸ್ಥಳವನ್ನು ಪರಿಶೀಲಿಸಿದರು ನಂತರ ಪಂಚರಾದ ಚಾ.ಸಾ.06 ಮತ್ತು 07 ರವರ ಸಮಕ್ಷಮ ಬೆ.09.00 ರಿಂದ 10.00 ಗಂಟೆ ಪಂಚನಾಮೆಯನ್ನು ಹಾಗೂ ಸ್ಥಳದಲ್ಲಿ 6 ಫೋಟೋಗಳನ್ನು ತೆಗೆದಿರುತ್ತಾರೆ,

ಹಾಗೂ ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿರುತ್ತಾರೆ, ಸಿಡಿಯನ್ನು ಹಾಜರುಪಡಿಸದ ಕಾರಣ ಸದರಿ ಫೊಟೋಗಳನ್ನು ನಿಶಾನೆಯನ್ನಾಗಿ ಗುರುತಿಸಲಾಗಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**11)** ಫ್ರಾಸಾ.**1** ರವರು ತಮ್ಮ ಪಾಟೀಸವಾಲಿನಲ್ಲಿ ದಿನಾಂಕ **07-01-2016** ರಂದು ನಾನು ಮತ್ತು ನನ್ನ ಹೆಂಡತಿ ಕಳ್ಳತನವಾದ ನಂತರ ಸುಮಾರು ಅರ್ಧ ಗಂಟೆ ಪರಿಶೀಲಿಸಿ ನೋಡಿರುತ್ತೇವೆ, ಆ ದಿನ ನಾವು ಪೊಲೀಸ್ ಠಾಣೆಗೆ ಸಂಜೆ.**07.30**ರ ಸುಮಾರಿಗೆ ಹೋಗಿರುತ್ತೇವೆ, ನಾನು ಸ್ವತಹ ನನ್ನ ಹಸ್ತಾಕ್ಷರದಿಂದ ಬರೆದು ಪಿರ್ಯಾದಿಯನ್ನು ಬರೆದಿರುತ್ತೇನೆ, ನಾನು ನನ್ನ ಹಸ್ತಾಕ್ಷರದಿಂದ ಬರೆದು ಕೊಟ್ಟಂತಹ ಪಿರ್ಯಾದಿಯನ್ನು ನೋಡಿ ಪೊಲೀಸ್ ಠಾಣೆಯಲ್ಲಿ ಗಣಕೀಕೃತ ಮಾಡಿರುತ್ತಾರೆ, ನಾನು ಠಾಣೆಯಲ್ಲಿ ಇದ್ದಾಗಲೇ ನನ್ನ ಹೆಂಡತಿಯಿಂದ ನನಗೇ ಕರೆಬಂದಿರುತ್ತದೆ, ನನ್ನ ಹೆಂಡತಿಯು ಕರೆಯಲ್ಲಿ ನಾನೇನು **10,000/-** ಕಳೆದು ಹೋಗಿರುತ್ತದೆ ಎಂದುಕೊಂಡಿರುತ್ತೇನೆ ಅದು **POST OFFICE** ನ ಪುಸ್ತಕದಲ್ಲಿ ಇರುತ್ತದೆ ಎಂದು ಹೇಳಿರುತ್ತಾರೆ, ಕಳ್ಳತನ ಮಾಡಿದವರು ಯಾರು ಎಂದು ನಾನು ನೋಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ನಾನು ಶಾಲೆಗೆ ಹೋಗಿದ್ದರಿಂದ ನಾನು ಅವರನ್ನು ನೋಡಿರುವುದಿಲ್ಲ ಪಂಚನಾಮೆ ಮಾಡಿದ ದಿನಾಂಕವು ನನಗೆ ನೆನಪಿರುವುದಿಲ್ಲ, ಪೊಲೀಸರು ಕರೆದುಕೊಂಡು ಬಂದಾಗ ಆರೊಪಿತನನ್ನು ನೋಡಿರುತ್ತೇನೆ, ಆತನ ಹೆಸರು ಬಾವಿಮನಿ ಶಿವಕುಮಾರ ಎಂದು ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ.

12) ಫ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ಇರುವುದಿಲ್ಲ, ತಾನು ಮತ್ತು ತನ್ನ ಗಂಡನಾದ ಚಾ.ಸಾ.01 ರವರು ಶಿಕ್ಷಕರು ಆಗಿರುತ್ತೇವೆ, ದಿ.07-01-2016 ರಂದು ತಾವು ಎಂದಿನಂತೆ ಶಾಲೆಗೆ ಹೋಗಿರುತ್ತೇವೆ, ಆ ದಿನ ತಾನು ಸಂಜೆ.05.20 ರ ಸುಮಾರಿಗೆ ಮೊದಲು ಮನೆಗೆ ಬಂದಿರುತ್ತೇನೆ, ಆಗ ಮನೆಯ ಬೀಗ ಮುರಿದಿರುವುದನ್ನು ಕಂಡು ಒಳಗೆ ಹೋಗಿ ನೋಡಿದಾಗ ತಮ್ಮ ಮನೆಯ ಟಿವಿ, ಲೈಟು, ಫ್ಯಾನು ಎಲ್ಲವೂ ಚಾಲನೆಯಲ್ಲಿತ್ತು ಆಗ ತಾನು ತನ್ನ ಗಂಡನಾದ ಚಾ,ಸಾ.01 ರವರಿಗೆ ಫೋನ ಮಾಡಿ ಯಾಕೆ ಮನೆಯ ಚೀಲಕವನ್ನು ಹಾಕಿ ಲೈಟನ್ನು ಹಾಕಿ ಹೋಗಿರುತ್ತೀರಿ ಎಂದು ವಿಚಾರಿಸಿದಾಗ ನಾನು ಮನೆಗೆ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆಗ ನನ್ನ ಗಂಡನಾದ ಚಾ.ಸಾ.1 ರವರು ಹಡಗಲಿಗೆ ಬಂದಿರುತ್ತೇನೆ ಆದರೆ ನಾನು ಅದಾಮ ಸ್ಟೋರನಲ್ಲಿರುತ್ತೇನೆ ಎಂದು ತಿಳಿಸಿರುತ್ತಾರೆ ನಾನು ಮನೆಯಲ್ಲಿ ನಡೆದ ವಿಚಾರವನ್ನು ತಿಳಿಸಿದಾಗ ಅವರು ಗಾಬರಿಗೊಂಡು ಮನೆಗೆ ಬಂದಿರುತ್ತಾರೆ, ಆಗ ನಮ್ಮ ಎರಡು ಬೆಡರೂಂಮಿನ ನಡುವೆ ಇರುವಂತಹ ಜಾಗದಲ್ಲಿ ಬೀರುವನ್ನು ಇಟ್ಟಿರುತ್ತೇವೆ ಸದರಿ ಬೀರುವಿನ ಬೀಗ ಮುರಿದು ಅದರಲ್ಲಿದ್ದ ವಸ್ತುಗಳು ಹಾಗೂ ಬಟ್ಟೆಗಳೆಲ್ಲ ಚೆಲ್ಲಾಪಿಲ್ಲಿಯಾಗಿರುತ್ತದೆ, ಬಿರುವಿನ ಮೇಲೆ ಇಟ್ಟಿದ್ದ ಟ್ರಂಕಗಳ ಚೀಲಕಗಳು ಸಹ ತೆಗೆದಿರುತ್ತದೆ. ನಂತರ 4 ರೋಡಗೋಲ್ಡ ಬಳೆಗಳು, 10/- ಮುಖಬೆಲೆಯ 24 ನೋಟುಗಳು ಒಟ್ಟು 240/- ರೂಪಾಯಿಗಳು, 500/- ರೂ ಮುಖಬೆಲೆಯ 20 ನೋಟುಗಳು

ಒಟ್ಟು **10,000/-** ನಗದು ಹಣ, ನನ್ನ ಮಗಳ ಒಂದು ತೊಲೆಯ ಕೊರಳಿನ ಬಂಗಾರದ ಚೈನ ಸರ್, ನನ್ನ ಗಂಡನಾದ ಚಾ.ಸಾ.**01** ರವರ ಚೌಕಾಕಾರದ **2** ಉಂಗುರಗಳು ಮತ್ತು ಅಂದಾಜು ತೂಕ **2** ಮುಕ್ಕಾಲು ತೊಲೆ ಆಗಿರುತ್ತದೆ. ನನ್ನ ಒಂದು ಬಂಗಾರದ ಸಾಧಾ ಉಂಗುರ ಅದರ ತೂಕ ಅರ್ಧ ತೊಲೆ ಆಗಿರುತ್ತದೆ, ಅದನ್ನು ಯಾರೋ ಕಳ್ಳರು ಬಂದು ನಾವು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಬಂದು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ನಂತರ ನನ್ನ ಗಂಡನಾದ ಚಾ.ಸಾ.**01** ರವರು ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ. **PSI** ಪ್ರಕಾಶ ರಾತೋಡರವರ ಮುಂದೆ ಸದರಿ ವಿಚಾರವನ್ನು ತಿಳಿಸಿರುತ್ತೇನೆ, ತಾನು ಹೇಳಿಕೆಯನ್ನು ನೀಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**13)** ಪ್ರಾಸಾ.**2** ರವರು ತಮ್ಮ ಪಾಟೀಸವಾಲಿನಲ್ಲಿ ನಮ್ಮ ಅತ್ತೇಯವರು ನಮ್ಮ ಮನೆಯಲ್ಲಿ ನಾವು ಕಳ್ಳತನವಾಗಿದೆ ಎಂದು ಭಾವಿಸಿದ್ದ ನನ್ನ ಮಗಳ ಬಂಗಾರದ ಚೈನು ಸರ ಹಾಗೂ ನನ್ನ ಗಂಡನ **2** ಉಂಗರು ಹಾಗೂ ನನ್ನ **1** ಉಂಗುರ ಅವರ ಬಳಿ ಇರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿ, ನಂತರ ನಮ್ಮ ಮನೆಯ ಗಾಡ್ರೆಜಿನಲ್ಲಿರುವ **10*24=240/-** ಹಾಗೂ **04** ರೋಲ್ಡ ಗೋಲ್ಡ ಬಳೆಗಳು ಮಾತ್ರ ಕಳ್ಳತನವಾಗಿರುವುದು ಎಂದು ನಮಗೆ ತಿಳಿದುಬಂದಿರುತ್ತದೆ ಎಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ, ನಂತರ ಪೊಲೀಸರು ನಮಗೆ ಬಾವಿಮನಿ ಶಿವಕುಮಾರ ಕಳ್ಳತನ

ಮಾಡಿರುತ್ತಾರನೆ ಎಂದು ತಿಳಿವಸಿರುತ್ತಾರೆ ಎಂದರೆ ಸರಿ, ಆರೋಪಿತನನ್ನು ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ.

14) ಪ್ರಾಸಾ.3 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ಇರುವುದಿಲ್ಲ, ಚಾ.ಸಾ.1 ಮತ್ತು 2 ರವರು ತಮ್ಮ ಮನೆಯ ಕೆಳಗೆ ಬಾಡಿಗೆ ಇರುತ್ತಾರೆ, ಸದರಿ ಪ್ರಕರಣದ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಾನು ಯಾರ ಮುಂದೆಯೂ ಹೇಳಿಕೆಯನ್ನು ನೀಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

15) ಪ್ರಾಸಾ.4 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ಇರುವುದಿಲ್ಲ, ಚಾ.ಸಾ.1 ಮತ್ತು 2 ರವರು ತಮ್ಮೊಂಗದಿಗೆ ಸಹ ಶಿಕ್ಷಕರಾಗಿ ಕೆಲಸ ಮಾಡಿರುತ್ತಾರೆ, ಸದರಿ ಪ್ರಕರಣದ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಾನು ಯಾರ ಮುಂದೆಯೂ ಹೇಳಿಕೆಯನ್ನು ನೀಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

16) ಪ್ರಾಸಾ.5 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತನ ಪರಿಚಯ ಇರುವುದಿಲ್ಲ, ಹೀಗೆ 09 ವರ್ಷದ ಹಿಂದೆ ತಾನು ಶಿವಕುಮಾರ ರವರ ಮನೆಯ ಬಳಿ ಬಂದಾಗ ಪೊಲೀಸರು ತನ್ನನ್ನು ಕರೆದಿರುತ್ತಾರೆ, ಪೊಲೀಸರ ಕೋರಿಕೆಯ ಮೇರೆಗೆ 02 ದಾಖಲೆಗಳಿಗೆ ತಾನು ಸಹಿ ಮಾಡಿರುತ್ತೇನೆ, ನಿ.ಪಿ.02 ಮತ್ತು 03 ರಲ್ಲಿ ಬರೆದಿರುವ ವಿಚಾರಗಳೆಲ್ಲವೂ ತನಗೆ ಗೊತ್ತಿರುವುದಿಲ್ಲ, ಆ ದಿನ ಸ್ಥಳದಲ್ಲಿ ಪೊಲೀಸರು 4 ಫೋಟೋವನ್ನು

ತೆಗೆದಿರುತ್ತಾರೆ, ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ತನಗೆ ಮಾಹಿತಿ ಇರುವುದಿಲ್ಲ, ಸಿಡಿಯನ್ನು ಹಾಜರುಪಡಿಸದ ಕಾರಣ ಸದರಿ ಫೋಟೋಗಳನ್ನು ನಿಶಾನೆಯನ್ನಾಗಿ ಗುರುತಿಸಲಾಗಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

17) ಪ್ರಾಸಾ.6 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತನ ಪರಿಚಯ ಇರುವುದಿಲ್ಲ, ಹೀಗೆ 8-9 ವರ್ಷದ ಹಿಂದೆ ತಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ 01 ದಾಖಲೆಗಳಿಗೆ ತಾನು ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ನನ್ನೊಂದಿಗೆ ಚಾ.ಸಾ.09 ರವರು ಇರುತ್ತಾರೆ, ನಿ.ಪಿ.06 ರಲ್ಲಿ ಬರೆದಿರುವ ವಿಚಾರಗಳೆಲ್ಲವೂ ತನಗೆ ಗೊತ್ತಿರುವುದಿಲ್ಲ, ಆ ದಿನ ಸ್ಥಳದಲ್ಲಿ ಪೊಲೀಸರು 7 ಫೋಟೋವನ್ನು ತೆಗೆದಿರುತ್ತಾರೆ, ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ತನಗೆ ಮಾಹಿತಿ ಇರುವುದಿಲ್ಲ, ಸಿ.ಡಿ.ಯನ್ನು ಹಾಜರುಪಡಿಸದ ಕಾರಣ ಸದರಿ ಫೋಟೋಗಳನ್ನು ನಿಶಾನೆಯನ್ನಾಗಿ ಗುರುತಿಸಲಾಗಿರುವುದಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

18) ಪ್ರಾಸಾ.7 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತನ ಪರಿಚಯ ಇರುವುದಿಲ್ಲ, ಹೀಗೆ ಸುಮಾರು ವರ್ಷದ ತಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ 01 ದಾಖಲೆಗೆ ನಾನು ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ನನ್ನೊಂದಿಗೆ ಚಾ.ಸಾ.08 ರವರು ಇರುತ್ತಾರೆ, ನಿ.ಪಿ.06 ರಲ್ಲಿ

ಬರೆದಿರುವ ವಿಚಾರಗಳೆಲ್ಲವೂ ತನಗೆ ಗೊತ್ತಿರುವುದಿಲ್ಲ, ಆ ದಿನ ಸ್ಥಳದಲ್ಲಿ ಪೊಲೀಸರು 7 ಫೋಟೋವನ್ನು ತೆಗೆದಿರುತ್ತಾರೆ, ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ತನಗೆ ಮಾಹಿತಿ ಇರುವುದಿಲ್ಲ, ಸಿಡಿಯನ್ನು ಹಾಜರುಪಡಿಸದ ಕಾರಣ ಸದರಿ ಫೋಟೋಗಳನ್ನು ನಿಶಾನೆಯನ್ನಾಗಿ ಗುರುತಿಸಲಾಗಿರುವುದಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**19)** ಪ್ರಾಸಾ.**8** ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ತನಗೆ ಇರುವುದಿಲ್ಲ ಹಾಗೂ ಅವರನ್ನು ತಾನು ನೋಡಿರುವುದಿಲ್ಲ, ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಈ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು ಯಾರ ಮುಂದೆಯು ಹೇಳಿಕೆಯನ್ನು ನೀಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**20)** ಪ್ರಾಸಾ.**9** ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ **08-01-2016** ರಂದು ತಾನು ಈ ಪ್ರಕರಣದ ಕಡತವನ್ನು ಕಾನೂನು ಮತ್ತು ಸುವ್ಯವಸ್ಥೆಯ **PSI** ಆಗಿದ್ದ ಶ್ರೀಶೈಲ ಕುಮಾರವರಿಂದ ಪಡೆದುಕೊಂಡು ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ಅದೇ ದಿನ ಪಂಚರಾದ ಚಾ.ಸಾ.**06** ಮತ್ತು **07** ರವರೊಂದಿಗೆ ಸಿಬ್ಬಂಧಿಗಳಾದ ಚಾ.ಸಾ.**10** ರಿಂದ **14** ರವರೊಂದಿಗೆ ಈ ಪ್ರಕರಣದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ.**01** ರವರು ಸ್ಥಳ ತೋರಿಸಿದಂತೆ ಪಂಚರ ಸಮಕ್ಷಮ ಬೆ.**09.00** ರಿಂದ **10.00** ಗಂಟೆಯವರೆಗೆ ಪಂಚನಾಮೆ

ಜರೂಗಿಸಿರುತ್ತೇನೆ ಮತ್ತು ಕೃತ್ಯ ಸ್ಥಳದ ಕಚ್ಛಾ ನಕಾಶೆಯನ್ನು ತಯಾರಿಸಿ ಪಂಚರ ಸಮಕ್ಷಮ ಫೊಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಚಾ.ಸಾ.02 ರಿಂದ 05 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.11-01-2016 ರಂದು ಈ ಪ್ರಕರಣದ ಆರೋಪಿತರ ಪತ್ತೇಗಾಗಿ ತಾನು ಮತ್ತು ಚಾ.ಸಾ.10 ರಿಂದ 14 ರವರೊಂದಿಗೆ ಹಡಗಲಿ ಪಟ್ಟಣ ಮತ್ತು ಹೊರವಲಯಕ್ಕೆ ಹೋಗಿರುತ್ತೇವೆ. ಬೆ.05.30 ರ ಸುಮಾರಿಗೆ ಹಡಗಲಿ ಪಟ್ಟಣದ ಎಲೆ ಮಾರುಕಟ್ಟೆಯ ಹತ್ತಿರ ಗಸ್ತು ತಿರುಗುತ್ತಿದ್ದಾಗ ಹಳ್ಳದ ಕಡೆಯಿಂದ ಒಬ್ಬ ವ್ಯಕ್ತಿ ಅನುಮಾನಸ್ಪದವಾಗಿ ಓಡಿ ಬರುವುದನ್ನು ಕಂಡು ಆತನು ತಮ್ಮನ್ನು ನೋಡುತ್ತಿದ್ದಂತೆ ಓಡಿ ಹೋಗಲು ಪ್ರಯತ್ನಿಸಿರುತ್ತಾನೆ ಆಗ ತಾವು ಆತನಿಗೆ ಬೆನ್ನತ್ತಿ ಹಿಡಿದು ವಿಚಾರಿಸಾಲಾಗಿ ತನ್ನ ಹೆಸರು ಬಾವಿಮನಿ ಶಿವಕುಮಾರ ತಂದೆ ದೇವೇಂದ್ರಪ್ಪ ಹಾಲಿಃವಾಸ ಹಡಗಲಿ ಸ್ವಂತ ಊರು ಮ್ಯಾನ್ಯರ ಮಸಲವಾಡ ಎಂದು ತಿಳಿಸಿರುತ್ತಾನೆ. ನಂತರ ಆತನನ್ನು ತಮ್ಮ ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಆತನನ್ನು ವಿಚಾರಿಸಲಾಗಿ ಚಾ.ಸಾ.01 ರವರ ಮನೆಯಲ್ಲಿ ಕಳುವು ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ ಆತನಿಂದ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.12-01-2016 ರಂದು ಬೆ.08.00 ಗಂಟೆ ಸುಮಾರಿಗೆ ಚಾ.ಸಾ.08 ಮತ್ತು 09 ರವರನ್ನು ಪಂಚರನ್ನಾಗಿ ಕರೆದುಕೊಂಡು ಸಿಬ್ಬಂಧಿಗಳಾದ ಚಾ.ಸಾ.10 ರಿಂದ 14 ರವರೊಂದಿಗೆ ಈ ಪ್ರಕರಣದ ಕೃತ್ಯ ಸ್ಥಳವಾದ ಚಾ.ಸಾ.1 ರವರ ಮನೆಗೆ ಹೋಗಿ ಆರೋಪಿ ತಾನು ಕಳುವು ಮಾಡಿದ ಸ್ಥಳದಲ್ಲಿ ಪಂಚನಾಮೆಯನ್ನು ಬೆ.08.30 ರಿಂದ 09.15 ಗಂಟೆಯವರೆಗೆ ಜರೂಗಿಸಿ, ಸದರಿ ಗುನ್ನೇ ಸ್ಥಳದಿಂದ ಸುಮಾರು 100 ಅಡಿ

ಅಂತರದಲ್ಲಿ ಕೃತ್ಯಕ್ಕೆ ಬಳಸಿದ 12 MM ನ ಒಂದು ಕಬ್ಬಿಣದ ರಾಡು, ಒಂದು ನೀಲಿ ಬಿಳಿ ಮಿಶ್ರೀತ ಚೌಕಳಿ ಡಿಸೈನ ಒಂದು ಟವಲನ್ನು ಜಪ್ತು ಪಡೆಸಿಕೊಂಡಿರುತ್ತೇವೆ. ಅದೇ ದಿನ ಆರೋಪಿ ಕಳುವು ಮಾಡಿದ್ದ ಮಾಲುಗಳನ್ನು ಬಚ್ಚಿಟ್ಟಿದ್ದ ಸ್ಥಳವಾದ ಹೊಳಗುಂದಿ ಗ್ರಾಮದ ಕರೆಮಟ್ಟಿ ಈರಣ್ಣರವರ ಮನೆಯ ಹಿಂದಿನ ತಿಪ್ಪೆಯಲ್ಲಿ ಹೋಗಿ ಆರೋಪಿ ತೋರಿಸಿದಂತೆ ಪರಿಶೀಲಿಸಿ ನೋಡಲಾಗಿ 10/- ಮುಖಬೆಲೆಯ 24 ನೋಟುಗಳನ್ನು ಒಟ್ಟು ರೂಪಾಯಿ 240/- ನಗದು ಹಣ ಮತ್ತು ಬಂಗಾರದಂತಹ ಬಣ್ಣವುಳ್ಳ 4 ಕೈಬಳೆಗಳನ್ನು ಜಪ್ತುಪಡೆಸಿಕೊಂಡಿರುತ್ತೇವೆ ಮತ್ತು ಸ್ಥಳದಲ್ಲಿ ಬೆ.09.15 ರಿಂದ 10.00 ಗಂಟೆಯವರೆಗೆ ಪಂಚನಾಮೆ ಜರೂಗಿಸಿರುತ್ತೇವೆ ಮತ್ತು ಸ್ಥಳದಲ್ಲಿ ಫೊಟೋಗಳನ್ನು ತೆಗೆಸಿರುತ್ತೇವೆ. ಸದರಿ ಪಂಚನಾಮೆಯೊಂದಿಗೆ ಅಮಾನತ್ತು ಪಡೆಸಿಕೊಂಡಿದ್ದ ಸ್ವತ್ತುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 09/2016 ರಂತೆ ಅಳವಡಿಸಿ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯನ್ನು ಚಾ.ಸಾ.10 ರಿಂದ 14 ರವರ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ.19-01-2016 ರಂದು ಈ ಪ್ರಕರಣದ ಆರೋಪಿ ಬಾವಿಮನಿ ಶಿವಕುಮಾರ ಈತನ ಗುರುತು ಪತ್ತೇಗಾಗಿ ಚಾ.ಸಾ.15 ರವರಿಗೆ ನಿವೇಧಿಸಿಕೊಂಡಿರುತ್ತೇನೆ. ದಿ.20-01-2016 ರಂದು ಚಾ.ಸಾ.15 ರವರು ಹಡಗಲಿ ಉಪಕಾರಾಗೃಹಕ್ಕೆ ಭೇಟಿ ನೀಡಿ ಆರೋಪಿ ಗುರುತು ಪತ್ತೇಮಾಡಿ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.16-06-2016 ರಂದು ಕೃತ್ಯ ಸ್ಥಳದ ಖಾತಾ ಉತಾರವನ್ನು ನಗರಸಭೆ ಕಾರ್ಯಾಲಯ ಹೂವಿನಹಡಗಲಿಯಿಂದ

ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡು ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿರುವುದರಿಂದ ದೋಷಾರೋಪಣೆಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷ್ಯ ನುಡಿದಿರುತ್ತಾರೆ.

**21)** ಫ್ರಾಸಾ.**9** ರವರು ತಮ್ಮ ಪಾಟೀಸವಾಲಿನಲ್ಲಿ ಕಡತವನ್ನು ಸ್ವೀಕರಿಸಿದ ನಂತರ ದೂರುದಾರನ ಮನೆಗೆ ಚಾ.ಸಾ.**10, 13** ಮತ್ತು ಪಂಚರೊಂದಿಗೆ ಹೋಗಿರುತ್ತೇನೆ, ದೂರುದಾರರು ತೋರಿಸಿದ ಜಾಗದಲ್ಲಿ ವಿವರವಾಗಿ ಪಂಚನಾಮೆಯನ್ನು ಮಾಡಿರುತ್ತೇನೆ, ಚಾ.ಸಾ.**2, 03, 05** ರವರ ಹೇಳಿಕೆಯನ್ನು ಪಡೆದಿರುತ್ತೇನೆ, ಮತ್ತು ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತೇನೆ. ಪಂಚರು ಅವರ ಸಾಕ್ಷ್ಯದಲ್ಲಿ ಪಂಚನಾಮೆಯಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಿರುವುದಿಲ್ಲ ಠಾಣೆಯಲ್ಲಿ ಸಹಿ ಮಾಡು ಎಂದಿದ್ದಕ್ಕೆ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ ಎಂದರೆ ಸರಿಯಲ್ಲ, ದಿ.**11-01-2016** ರಂದು ಆರೋಪಿತನ ಪತ್ತೇಗಾಗಿ ರಾತ್ರಿ ಗಸ್ತು ಮಾಡಿರುತ್ತೇವೆ, ಪಟ್ಟಣದಲ್ಲಿ ಆ ರಾತ್ರಿ ಎಲೆ ಮಾರ್ಕೆಟು, ಹೊರವಲಯದಲ್ಲಿ ಗಸ್ತು ಮಾಡಿರುತ್ತೇವೆ, ಗಸ್ತು ಮಾಡುವಾಗ ಎಲೆ ಮಾರ್ಕೆಟನಲ್ಲಿ ಬೆ.**05.30** ಕ್ಕೆ ಒಬ್ಬ ಆಸಾಮಿ ಓಡಿ ಹೋಗುತ್ತಿದ್ದನು ಆತನನ್ನು ಹಿಡಿದು ವಿಚಾರ ಮಾಡಿರುತ್ತೇವೆ ಆತನೇ ಈ ಪರಕರಣದ ಆರೋಪಿತನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಗಸ್ತು ಹೋಗಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ ಎಂದು ನುಡಿದಿರುತ್ತಾರೆ.

22) ಫ್ರಾಸಾ.10 ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12-01-2016 ರಂದು ಬೆಳಗಿನ ಜಾವ 04.30ರ ಸಮಯದಲ್ಲಿ ತಾನು ಮತ್ತು ಚಾಸಾ 11 ರಿಂದ 14 ಮತ್ತು ಚಾಸಾ 16 ರವರು ಸೇರಿ ಹಡಗಲಿ ಪಟ್ಟಣದ ಎಲೆ ಮಾರುಕಟ್ಟೆ ಹತ್ತಿರ ಗಸ್ತಿನಲ್ಲಿದ್ದಾಗ ಒಬ್ಬ ವ್ಯಕ್ತಿ ಅನುಮಾನಸ್ಪಾದವಾಗಿ ತಿರುಗಾಡುತ್ತಿದ್ದು ಕಂಡು ಬಂದಾಗ ಆತನು ತಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನಿಸಿರುತ್ತಾನೆ, ಆಗ ತಾವು ಆತನನ್ನು ಸೊಪ್ಪಿನ ಓಣಿಯಲ್ಲಿ ಹಿಂಬಾಲಿಸಿಕೊಂಡು ಹೋಗಿ ಹಿಡಿದುಕೊಂಡಿರುತ್ತೇವೆ, ತದನಂತರ ಪೊಲೀಸ್ ಠಾಣೆಗೆ ಆತನನ್ನು ಕರೆದುಕೊಂಡು ಹೋಗಿ ಚಾಸಾ 16 ರವರು ಆತನನ್ನು ವಿಚಾರಿಸಿದಾಗ ಆತನು ದಿನಾಂಕ 5-1-2016 ರಂದು ಜೈಲಿನಿಂದ ಹೊರಗಡೆ ಬಂದು ದಿನಾಂಕ 7-1-2016 ರಂದು ಹೂವಿನಹಡಗಲಿ ಪಟ್ಟಣದ ಬಸವಪ್ರಭು ನಗರದಲ್ಲಿನ ವಿದ್ಯಾಂಜಲಿ ಶಾಲೆಯ ಹತ್ತಿರ ಒಂದು ಬೀಗ ಹಾಕಿದ ಮನೆಯನ್ನು ಮಧ್ಯಾಹ್ನದ ಸಮಯದಲ್ಲಿ ಕಬ್ಬಿಣದ ರಾಡಿನಿಂದ ಮೀಟಿ ಬೀರುವಿನಲ್ಲಿದ್ದ ರೂ 240-00 ಮತ್ತು ನಾಲ್ಕು ಬಂಗಾರದಂತೆ ಹೋಲುವ ರೋಲ್ಡೋಲ್ಡಿನ ಕೈಬಳೆಗಳನ್ನು ಕಳ್ಳತನ ಮಾಡಿ ಹೊಳಗುಂದಿ ಗ್ರಾಮದಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿರುತ್ತಾನೆ, ನಂತರ ಚಾಸಾ 16 ರವರು ತನಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ತಾನು ಹೋಗಿ ಚಾಸಾ 8 ಮತ್ತು 9 ರವರನ್ನು ಪಂಚರನ್ನಾಗಿ ಕರೆದುಕೊಂಡು ಬಂದು, ಚಾಸಾ 16 ರ ಮುಂದೆ ಹಾಜರುಪಡಿಸಿರುತ್ತೇನೆ, ಚಾಸಾ 16 ರವರು ಮಂದಿನ ಕ್ರಮ ಕೈಗೊಂಡಿರುತ್ತಾರೆ ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷ್ಯ ನುಡಿದಿರುತ್ತಾರೆ.

23) ಪ್ರಾಸಾ.10 ರವರು ತಮ್ಮ ಪಾಟೀಸವಾಲಿನಲ್ಲಿ ಬೆಳಗಿನ ಜಾವ 3.00 ಗಂಟೆಗೆ ಗುಡ್ ಮಾರ್ನಿಂಗ್ ಬೀಟ್ಗೆ ಹೋಗಿರುತ್ತೇವೆ, ನನ್ನ ಹೇಳಿಕೆಯಲ್ಲಿ ಗುಡ್ ಮಾರ್ನಿಂಗ್ ಬೀಟ್ಗೆ ಹೋಗಿರುತ್ತೇವೆ ಎಂದು ಹೇಳಿರುವುದಿಲ್ಲ, ನಾನು ಮೇಲೆ ಹೇಳಿದ ವೃತ್ತಗಳು ನೇರ ರಸ್ತೆಯಲ್ಲಿ ಬರುತ್ತವೇ ಎಂದರೆ ಸರಿ, ಎಲೆ ಮಾರುಕಟ್ಟೆಗೆ ಬರುವಾಗ ಕರ್ವಿಂಗ್ ಇರುತ್ತವೆ ಎಂದರೆ ಸರಿ, ಎಲೆ ಪೇಟೆಯಲ್ಲಿ ಅನುಮಾನಸ್ಪದ ವ್ಯಕ್ತಿಯು ಹಳ್ಳದ ಹತ್ತಿರ ಇರುವ ಬ್ರಿಡ್ಜ್ ಮೇಲೆ ನೇರವಾಗಿ ಬಂದಿದ್ದು, ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ, ಸದರಿ ಅನುಮಾನಸ್ಪದ ವ್ಯಕ್ತಿಯು ಪೂರ್ವ ದಿಕ್ಕಿಗೆ ಓಡಿ ಹೋಗಿರುತ್ತಾನೆ, ಎಲೆ ಪೇಟೆಯ ಬ್ರಿಡ್ಜಿನ ಪೂರ್ವ ದಿಕ್ಕಿಗೆ ಫಣಿ ಡಾಕ್ಟರ್ ಇವರ ಮನೆ ಇರುತ್ತದೆ ಎಂದರೆ ದಿಕ್ಕು ನನಗೆ ಗೊಂದಲವಾಗುತ್ತದೆ ಹೇಳಲಾಗುವುದಿಲ್ಲ ಆದರೆ ಆರೋಪಿತನು ಲ್ಯಾಂಡ್ ಆರ್ಮಿ ಆಫೀಸರ್ ಹುಚ್ಚಯ್ಯರವರ ಮನೆ ಮುಂದೆ ಓಡಿ ಹೋಗಿರುತ್ತಾನೆ, ಹುಚ್ಚಯ್ಯನವರ ಮನೆ ರಾಮದೇವರ ದೇವಸ್ಥಾನದ ಹಿಂಭಾಗದಲ್ಲಿ ಇರುತ್ತದೆ ಎಂದರೆ ಸರಿ, ಚಾಸಾ 13 ರವರು ಆರೋಪಿತನು ಓಡಿ ಹೋಗುವಾಗ ಹಿಡಿದಿರುತ್ತಾರೆ ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದು ನುಡಿದಿರುತ್ತಾರೆ.

24) ಪ್ರಾಸಾ.11 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತನ ಪರಿಚಯ ಇರುವುದಿಲ್ಲ, ತನಗೆ ಚಾ.ಸಾ.01 ರಿಂದ 05 ಮತ್ತು 07 ರಿಂದ 09 ರವರ ಪರಿಚಯ ಇರುವುದಿಲ್ಲ, ತಾನು ಯಾವುದೇ ಘಟನೆ ನೋಡಿಲ್ಲ ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರೂಗಿಸಿಲ್ಲ, ತಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ,

ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಇದಲ್ಲದೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ತಾನು ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲವೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**25).** ಈ ಪ್ರಕರಣದಲ್ಲಿ ದೂರುದಾರದಂತಹ ಪ್ರಾಸಾ 1 ರವರು ಮತ್ತು ಈ ಪ್ರಕರಣದಲ್ಲಿ ಹೇಳಲಾದ ಕಳ್ಳತನ ಆದ ನಂತರ ನೋಡಿದ ಮೊದಲನೇ ವ್ಯಕ್ತಿಯಾದಂತಹ ಪ್ರಾಸಾ 2 ರವರು ಈ ಪ್ರಕರಣದಲ್ಲಿ ಆಪಾಧಿಸಲಾದ ಅಪರಾಧವನ್ನು ಆರೋಪಿತನೇ ನಿಸ್ಸಂದೇಹವಾಗಿ ಮಾಡಿರುತ್ತಾನೆ ಎಂದು ಯಾವುದೇ ನೇರ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಮತ್ತು ಆರೋಪಿತ ಯಾರು ಎಂದು ನಿಮಗೆ ಗೊತ್ತಿದೆಯಾ ಎಂಬ ನ್ಯಾಯಾಲಯದ ಪ್ರಶ್ನೆಗೆ ಪ್ರಾಸಾ 1 ರವರು ಪೋಲಿಸರು ಕರೆದುಕೊಂಡು ಬಂದಾಗ ಆರೋಪಿತನನ್ನು ನೋಡಿರುತ್ತೇವೆ ಎಂದು ನುಡಿದಿದ್ದು, ಆರೋಪಿತನೇ ಈ ಪ್ರಕರಣದಲ್ಲಿ ಹೇಳಲಾದಂತಹ ಅಪರಾಧವನ್ನು ಮಾಡಿರುತ್ತಾನೆ ಎಂದು ನೋಡಿರುವುದಿಲ್ಲ. ಪ್ರಾಸಾ 1 ಮತ್ತು 2 ರವರಿಗೆ ಪೋಲಿಸರು ಆರೋಪಿತನನ್ನು ತೋರಿಸಿ ಇತನೇ ಕಳ್ಳತನ ಮಾಡಿರುತ್ತಾನೆ ಎಂದು ಹೇಳಿದಾಗ ಆರೋಪಿತನ ಬಗ್ಗೆ ತಿಳಿದಿರುತ್ತದೆ.

**26).** ದೂರುದಾರರಾದಂತಹ ಪ್ರಾಸಾ1 ರವರೇ ಅವರ ಸಾಕ್ಷ್ಯದಲ್ಲಿ ಕಳ್ಳತನವಾಗಿದೆ ಎಂದು ತಿಳಿದಿದ್ದ 500 ಮುಖಬೆಲೆಯ 20 ನೋಟುಗಳು ಅವರ RD ಪುಸ್ತಕದಲ್ಲಿ ಇಟ್ಟಿದ್ದನ್ನು ಗಮನಿಸಿ ಅವರ ಹೆಂಡತಿಯಾದಂತಹ ಪ್ರಾಸಾ 2 ರವರು

ಕರೆಮಾಡಿ ತಿಳಿಸಿರುತ್ತಾರೆ ಮತ್ತು ಕಳ್ಳತನವಾಗಿರುತ್ತದೆ ಎಂದು ತಿಳಿದಿದ್ದ ಅವರ ಮಗಳ ಚೈನ್ ಸರ, ಎರಡು ಉಂಗುರ ಮತ್ತು ಫ್ರಾಸಾ 2 ರವರ 1 ಉಂಗುರ ಅವರ ತಾಯಿಯ ಹತ್ತಿರ ಇರುತ್ತದೆ ಎಂದು ಅವರೆ ತಿಳಿಸಿರುತ್ತಾರೆ ಎಂದು ಫ್ರಾಸಾ 2 ರವರು ಫೋನ್ ಕರೆ ಮುಖಾಂತರ ಹೇಳಿರುತ್ತಾರೆ ಎಂದು ನುಡಿದಿದ್ದು, ನಂತರ ಫ್ರಾಸಾ 1 ರವರು ಪಂಚನಾಮೆ ಮಾಡಿದ ದಿನಾಂಕ ನನಗೆ ನೆನಪು ಇರುವುದಿಲ್ಲ ಎಂದು ನುಡಿದಿದ್ದು ಹಾಗೂ ಫ್ರಾಸಾ2 ರವರು ಆರೋಪಿತನನ್ನು ನಾನು ನೋಡಿರುವುದಿಲ್ಲ ಎಂದು ನುಡಿದಿದ್ದರಿಂದ ಫ್ರಾಸಾ 1 ಮತ್ತು 2 ರವರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ.

27). ಚಾಸಾ 3- ಫ್ರಾಸಾ 3, ಚಾಸಾ 4- ಫ್ರಾಸಾ 4 ಮತ್ತು ಚಾಸಾ 5-ಫ್ರಾಸಾ 8 ರವರನ್ನು ಅಂತಿಮ ವರದಿಯಲ್ಲಿ ಸಾಕ್ಷಿದಾರೆಂದು ತೋರಿಸಿದ್ದು, ಫ್ರಾಸಾ 3 ರವರು ಅವರ ಮುಖ್ಯವಿಚಾರಣೆಯ ಸಾಕ್ಷ್ಯದಲ್ಲಿ ಆರೋಪಿತನ ಪರಿಚಯ ಇರುವುದಿಲ್ಲ, ಚಾ.ಸಾ.1 ಮತ್ತು 2 ರವರು ತಮ್ಮ ಮನೆಯ ಕೆಳಗೆ ಬಾಡಿಗೆ ಇರುತ್ತಾರೆ, ಸದರಿ ಪ್ರಕರಣದ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಾನು ?ಯಾರ ಮುಂದೆಯೂ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ನುಡಿದಿದ್ದು, ಫ್ರಾಸಾ.4 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ಇರುವುದಿಲ್ಲ, ಚಾ.ಸಾ.1 ಮತ್ತು 2 ರವರು ತಮ್ಮೊಂದಿಗೆ ಸಹ ಶಿಕ್ಷಕರಾಗಿ ಕೆಲಸ ಮಾಡಿರುತ್ತಾರೆ, ಸದರಿ ಪ್ರಕರಣದ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಾನು ?ಯಾರ ಮುಂದೆಯೂ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ನುಡಿದಿದ್ದು ಮತ್ತು ಫ್ರಾಸಾ

**8** ರವರು ಆರೋಪಿತನ ಪರಿಚಯ ತನಗೆ ಇರುವುದಿಲ್ಲ ಹಾಗೂ ಅವರನ್ನು ತಾನು ನೋಡಿರುವುದಿಲ್ಲ, ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾರ ಮುಂದೆಯು ಹೇಳಿಕೆಯನ್ನು ನೀಡಿರುವುದಿಲ್ಲವೆಂದು ನುಡಿದಿದ್ದರಿಂದ ಆರೋಪಿತನ ವಿರುದ್ಧ ಆಪಾಧನೆಯನ್ನು ಸಾಭೀತು ಆಗಿರುವುದಿಲ್ಲ.

**28).** ಚಾಸಾ **16**-ಫ್ರಾಸಾ **9** ತನಿಖಾಧಿಕಾರಿಯಾದ್ದು ಇವರು ತಮ್ಮ ಸಾಕ್ಷ್ಯದಲ್ಲಿ ಪಂಚರಾದಂತಹ ಚಾಸಾ **6** ಮತ್ತು **7** ರವರ ಸಮಕ್ಷಮ ದಿನಾಂಕ **8.1.2026** ರಂದು ಬೆಳಿಗ್ಗೆ **9** ರಿಂದ **10** ಗಂಟೆಯವರೆಗೆ ಪಂಚನಾಮೆಯನ್ನು ಜರೂಗಿಸಿ ಕಚ್ಚಾ ನಕಾಶೆಯನ್ನು ತಯಾರಿಸಿ ಪೋಟೋಗಳನ್ನು ತೆಗೆಸಿರುತ್ತೇನೆ ಎಂದು ನುಡಿದಿದ್ದು, ಆದರೆ ಪಂಚರಾದಂತಹ ಚಾಸಾ **6** -ಫ್ರಾಸಾ **11** ಅವರ ಸಾಕ್ಷ್ಯದಲ್ಲಿ ಆರೋಪಿತನ ಪರಿಚಯ ಇರುವುದಿಲ್ಲ, ತನಗೆ ಚಾ.ಸಾ.**01** ರಿಂದ **05** ಮತ್ತು **07** ರಿಂದ **09** ರವರ ಪರಿಚಯ ಇರುವುದಿಲ್ಲ, ತಾನು ಯಾವುದೇ ಘಟನೆ ನೋಡಿಲ್ಲ ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರೂಗಿಸಿಲ್ಲ, ತಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಇದಲ್ಲದೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ತಾನು ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲವೆಂದು ನುಡಿದಿದ್ದು ಮತ್ತು ಚಾಸಾ **7** -ಫ್ರಾಸಾ **5** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತನ ಪರಿಚಯ ಇರುವುದಿಲ್ಲ, ಹೀಗೆ **09** ವರ್ಷದ ಹಿಂದೆ ತಾನು ಶಿವಕುಮಾರ ರವರ ಮನೆಯ ಬಳಿ ಬಂದಾಗ

ಪೊಲೀಸರು ತನ್ನನ್ನು ಕರೆದಿರುತ್ತಾರೆ, ಪೊಲೀಸರ ಕೋರಿಕೆಯ ಮೇರೆಗೆ 02 ದಾಖಲೆಗಳಿಗೆ ತಾನು ಸಹಿ ಮಾಡಿರುತ್ತೇನೆ, ನಿ.ಪಿ.02 ಮತ್ತು 03 ರಲ್ಲಿ ಬರೆದಿರುವ ವಿಚಾರಗಳೆಲ್ಲವೂ ತನಗೆ ಗೊತ್ತಿರುವುದಿಲ್ಲ ಎಂದು ನುಡಿದಿದ್ದು ಮತ್ತು ಸಿ.ಡಿ.ಯನ್ನು ಹಾಜರುಪಡಿಸದ ಕಾರಣ ಸದರಿ ಫೋಟೋಗಳನ್ನು ನಿಶಾನೆಯನ್ನಾಗಿ ಗುರುತಿಸದೆ ಇದ್ದರಿಂದ, ಇದರೊಂದಿಗ ಫ್ರಾಸಾ 9 ರವರು ಮುಂದುವರೆದು ದಿನಾಂಕ 12.1.2016 ರಂದು ಬೆಳಿಗ್ಗೆ 8 ಗಂಟೆ ಸುಮಾರಿಗೆ ಚಾಸಾ 8 ಮತ್ತು 9 ರವರನ್ನು ಪಂಚರನ್ನಾಗಿ ಕರೆದುಕೊಂಡು ಕೃತ್ಯ ಸ್ಥಳದಲ್ಲಿ ಮು.1 ಮತ್ತು 2 ರನ್ನು ಜಪ್ತು ಪಡಿಸಿಕೊಂಡಿರುತ್ತೇವೆ ಎಂದು ನುಡಿದಿದ್ದು, ಆದರೆ ಪಂಚರಾದಂತಹ ಚಾಸಾ 8–ಫ್ರಾಸಾ6 ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತನ ಪರಿಚಯ ಇರುವುದಿಲ್ಲ, ಹೀಗೆ 8–9 ವರ್ಷದ ಹಿಂದೆ ತಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ 01 ದಾಖಲೆಗಳಿಗೆ ತಾನು ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ನನ್ನೊಂದಿಗೆ ಚಾ.ಸಾ.09 ರವರು ಇರುತ್ತಾರೆ, ನಿ.ಪಿ.06 ರಲ್ಲಿ ಬರೆದಿರುವ ವಿಚಾರಗಳೆಲ್ಲವೂ ತನಗೆ ಗೊತ್ತಿರುವುದಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲವೆಂದು ನುಡಿದಿದ್ದು ಮತ್ತು ಚಾಸಾ 9 –ಫ್ರಾಸಾ 7 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತನ ಪರಿಚಯ ಇರುವುದಿಲ್ಲ, ಹೀಗೆ ಸುಮಾರು ವರ್ಷದ ಹಿಂದೆ ತಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ 01 ದಾಖಲೆಗೆ ನಾನು ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ನನ್ನೊಂದಿಗೆ ಚಾ.ಸಾ.08 ರವರು ಇರುತ್ತಾರೆ, ನಿ.ಪಿ.06 ರಲ್ಲಿ ಬರೆದಿರುವ ವಿಚಾರಗಳೆಲ್ಲವೂ ತನಗೆ ಗೊತ್ತಿರುವುದಿಲ್ಲ, ತನ್ನ ಸಮಕ್ಷಮ ಪೊಲೀಸರು

ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲವೆಂದು ನುಡಿದಿದ್ದು, ಫ್ರಾಸಾ 9 ರವರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ. ಮುಂದುವರೆದು ತನಿಖಾಧಿಕಾರಿಯಾದಂತಹ ಫ್ರಾಸಾ 9 ರವರು ತಮ್ಮ ಸಾಕ್ಷ್ಯದಲ್ಲಿ ದಿ.20.1.2016 ರಂದು ತಾಲ್ಲುಕು ದಂಡಾಧಿಕಾಯಾದ ಉಪ ಕಾರಗೃಹಕ್ಕೆ ಭೇಟಿ ನೀಡಿ ಆರೋಪಿ ಗುರುತು ಪತ್ತೆಮಾಡಿ ನೀಡಿದ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದಿದ್ದು, ಆದರೆ ಈ ಪ್ರಕರಣದ ಕಡತದಲ್ಲಿ ಯಾವುದೇ ಗುರುತು ಪತ್ತೆಮಾಡಿದ ವರದಿಯೂ ಇರುವುದಿಲ್ಲ ಹಾಗೂ ಅದನ್ನು ಗುರುತಿಸಲಾಗಿರುವುದಿಲ್ಲ ಹೀಗಾಗಿ ತನಿಖಾಧಿಕಾರಿಯಾದಂತಹ ಫ್ರಾಸಾ 9 ರವರು ಕಾನೂನು ಬಾಹಿರವಾಗಿ ತನಿಖೆ ಪ್ರಕ್ರಿಯೆಗಳನ್ನು ಮಾಡಿ ದೋಷಾಪೂರಿತವಾದಂತಹ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿದು ಬರುತ್ತದೆ.

29). ಚಾಸಾ 10–ಫ್ರಾಸಾ 10 ಆದಂತಹ ತನಿಖಾ ಸಹಾಯಕ ರವರು ಸಹ ಅವರ ಸಾಕ್ಷ್ಯದಲ್ಲಿ ಆರೋಪಿತನೇ ಈ ಪ್ರಕರಣದಲ್ಲಿ ಆಪಾಧಿಸಲಾದಂತಹ ಅಪರಾಧವನ್ನು ಮಾಡಿರುತ್ತಾನೆ ಎಂಬಂತೆ ಯಾವುದೇ ನೇರ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

30) ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ 1 ರಿಂದ 8 ರವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಿದಾಗಲೂ ಅಭಿಯೋಜನೆಯ ಪರ ಯಾವುದೇ ಪೂರಕ ಹೇಳಿಕೆಗಳನ್ನು ನೀಡಿರುವುದಿಲ್ಲ.

31) ಫ್ರಾಸಾ.1 ರವರು ದೂರುದಾರರಾಗಿದ್ದು ಮತ್ತು ಫ್ರಾಸಾ 2 ರವರು ಈ ಪ್ರಕರಣದ ಬಹುಮುಖ್ಯ ಸಾಕ್ಷಿಗಳಾಗಿದ್ದು ಅವರೆ ಅಭಿಯೋಜನೆಗೆ

ಪೂರಕವಾದಂತಹ ಸಾಕ್ಷ್ಯವನ್ನು ನುಡಿದಿರುವುದಿಲ್ಲ . ಅಭಿಯೋಜನೆಯು ಈ ಪ್ರಕರಣವನ್ನು ಸಾಭೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ದೋಷಾರೋಪಣೆಯನ್ನು ಸಾಭಿತು ಪಡಿಸಲು ವಿಚಾರಣೆ ಮಾಡಿದ ಸಾಕ್ಷಿಗಳು ಅಭಿಯೋಜನೆಗೆ ವ್ಯತಿರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಕೃತ್ಯ ಸ್ಥಳದ ಪಂಚನಾಮೆ ಹಾಗೂ ಜಪ್ತು ಪಂಚನಾಮೆಗಳು ಸಾಭೀತು ಆಗಿರುವುದಿಲ್ಲ. ಅಭಿಯೋಜನೆಯು ಕೇವಲ ದಾಖಲೆಗಳ ಆಧಾರದ ಮೇಲೆ ಪ್ರಕರಣವನ್ನು ಸಾಭೀತುಪಡಿಸಲು ಪ್ರಯತ್ನಿಸಲಾಗಿರುತ್ತದೆ, ಆದರೆ ಮೇಲೆ ಹೇಳಿದ ಅಂಶಗಳನ್ನು ಸಾಭೀತುಪಡಿಸಲು ಮೌಖಿಕ ಸಾಕ್ಷ್ಯದ ಅವಶ್ಯಕತೆ ಇರುತ್ತದೆ. ಆರೋಪಿತನ ವಿರುದ್ಧ ಯಾವುದೇ ಅಪರಾಧ ಮಾಡಿದ ಬಗ್ಗೆ ನಿಸ್ಸಂಶಯುತವಾಗಿ ಸಾಭೀತುಪಡಿಸಲು ಅಭಿಯೋಜನೆಗೆ ಸಾಧ್ಯವಾಗಿದೇ ಇರುವುದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಮೇಲೆ ಹೇಳಿದ 1 ರಿಂದ 4 ನೇ ಅಂಶಗಳಿಗೆ ನಕರಾತ್ಮಕವಾಗಿ ಉತ್ತರಿಸಲಾಗಿದೆ.

32) <u>ಅಂಶ 5:</u> ಈ ಮೇಲಿನ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ;

## <u>ಆದೇಶ</u>

- ಕಲಂ. 248 (1) ದಂ. ಪ್ರ. ಸಂ. ಅಡಿಯಲ್ಲಿ ಆರೋಪಿತನ ಮೇಲೆ ಭಾ.ದಂ.ಸಂ.ಕಲಂ.454 ಮತ್ತು 380 ರ ಅಡಿಯಲ್ಲಿನ ಅಪರಾಧಗಳಿಂದ ಬಿಡುಗಡೆ ಗೊಳಿಸಲಾಗಿದೆ.

- ಆರೋಪಿತನ ಹಾಗೂ ಅವರ ಜಾಮೀನುದಾರನ ಜಾಮೀನು ಮುಚ್ಚಳಿಕೆಗಳು ಕಲಂ.437(A) ಸಿ.ಆರ್.ಪಿ.ಸಿ ಅಂತೆ ಇಂದಿನಿಂದ ಆರು ತಿಂಗಳ ಕಾಲ ಚಾಲ್ತಿಯಲ್ಲಿ ಇದ್ದು ತದನಂತರ ರದ್ದು ಪಡಿಸಲಾಗಿರುತ್ತದೆ.

- ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಮು.ಮಾ *01* ರಿಂದ *3* ನ್ನು ಅನುಪಯುಕ್ತ ವಸ್ತುಗಳು ಆಗಿದ್ದರಿಂದ ಇದನ್ನು ಅಪಿಲು ಅವದಿ ಮುಗಿದ ನಂತರ ಅವುಗಳನ್ನು

ನಾಶಪಡಿಸಲು ಅದೇಶಿಸಿಸಲಾಗಿದೆ ಮತ್ತು ಮು.ಮಾ *04* ನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಲು ಆದೇಸಲಾಗಿದೆ.

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚಾದ ನಂತರ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 09-06-2026 ರಂದು ಘೋಷಿಸಲಾಯಿತು.)

(ಶ್ರೀಮತಿ ಅಕ್ಷತಾ.ಟಿ)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.

# ಅನುಬಂಧ

**ಅಭಿಯೋಜನಾ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:**

| | |
|---|---|
| ಪ್ರಾ.ಸಾ-1 | ಶಿವಕುಮಾರ |
| ಪ್ರಾ.ಸಾ-2 | ಸುಜಾತಾ |
| ಪ್ರಾ.ಸಾ-3 | ಗುರುಬಸವರಾಜ |
| ಪ್ರಾ.ಸಾ-4 | ಚಂದ್ರಪ್ಪ |
| ಪ್ರಾ.ಸಾ-5 | ಮರುಳಸಿದ್ದಪ್ಪ |
| ಪ್ರಾ.ಸಾ-6 | ಶಂಕರಪ್ಪ |
| ಪ್ರಾ.ಸಾ-7 | ಹಾಲೇಶ |
| ಪ್ರಾ.ಸಾ-8 | ಮಾಲತೇಶ |
| ಪ್ರಾ.ಸಾ-9 | ಜಿ.ಎಸ್.ದೊಡಡಪ್ಪ |
| ಪ್ರಾ.ಸಾ-10 | ಕನ್ನಿಹಳ್ಳಿ ನಾಗರಾಜ |
| ಪ್ರಾ.ಸಾ-11 | ಹಣ್ಣಿ ಪ್ರಕಾಶ |

**ಅಭಿಯೋಜನಾ ಪರ ಗುರ್ತಿಸಿದ ದಾಖಲೆಗಳ ಪಟ್ಟಿ:**

| | |
|---|---|
| ನಿಶಾನೆ.ಪಿ.01 | : ದೂರು |
| ನಿಶಾನೆ.ಪಿ.02 | : ಸ್ಥಳದ ಪಂಚನಾಮೆ |
| ನಿಶಾನೆ.ಪಿ.03 | : ಕಚ್ಚಾ ನಕಾಶೆ |
| ನಿಶಾನೆ.ಪಿ.04 ಮತ್ತು 5 | : ಹೇಳಿಕೆ |

**ನಿಶಾನೆ.ಪಿ.06** : ಜಪ್ತು ಪಂಚನಾಮೆ

**ನಿಶಾನೆ.ಪಿ.07** : ಹೇಳಿಕೆ

**ನಿಶಾನೆ.ಪಿ.8** : ಸ್ವತ್ತಿನ ಪಟ್ಟಿ

**ನಿಶಾನೆ.ಪಿ.9** : ಆರೋಪಿ ಸ್ವ ಖುಷಿ ಹೇಳಿಕೆ

**ನಿಶಾನೆ.ಪಿ.10** : ನಮೂನೆ 3

ಆರೋಪಿತರ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳ ಪಟ್ಟಿ:

-- ಇರುವುದಿಲ್ಲ--

ಮುದ್ದೆಮಾಲುಗಳುಃ

**M.O.No.1 :** ಎಂಎಂನ ಒಂದು ಕಬ್ಬಿಣದ ರಾಡ್
**M.O.No.2 :** ಕ್ರೃತ್ಯಕ್ಕೆ ಬಳಸಿದ ಬಿಳಿ ಮಿಶ್ರಿತ ಬಣ್ಣದ ಟವೆಲ್
**M.O.No.3 :** 4 ಬಂಗಾದ ಬಣ್ಣದ ಲೇಪಿನ ಉಳ್ಳ ಬಳೆಗಳು
**M.O.No.4 :** 10 ರೂ ಮುಖಬೆಲೆಯ 240 ರೂ ನಗದು ಹಣ

(ಶ್ರೀಮತಿ ಅಕ್ಷತಾ ಟಿ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.